# ಕರ್ನಾಟಕ ವಿಧಾನ ಪರಿಷತ್ತು

| | |
|---|---|
| ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ: | 224 |
| ಸದಸ್ಯರ ಹೆಸರು : | ಶ್ರೀ ಎನ್.ರವಿಕುಮಾರ್ |
| ಉತ್ತರಿಸಬೇಕಾದ ದಿನಾಂಕ: | 15.02.2022 |
| ಉತ್ತರಿಸಬೇಕಾದ ಸಚಿವರ ಹೆಸರು: | ಮಾನ್ಯ ಮುಜರಾಯಿ ಹಾಗೂ ಹಜ್ ವಕ್ಫ್ ಸಚಿವರು |

<table>
<tr><th>ಕ್ರ. ಸಂ</th><th>ಪ್ರಶ್ನೆ</th><th>ಉತ್ತರ</th></tr>
<tr><td>ಅ)</td><td>ಕಳೆದ 10 ತಿಂಗಳಿನಲ್ಲಿ ಅನುವಂಶಿಕ ಮೊಕ್ತೇಸರರ ನಿಯುಕ್ತಿ ಕುರಿತಾಗಿ ಧಾರ್ಮಿಕ ದತ್ತಿ ಆಯುಕ್ತರ ಕಛೇರಿಯಲ್ಲಿ ಜಿಲ್ಲಾಧಿಕಾರಿಗಳ ಕಛೇರಿಯಿಂದ ಶಿಫಾರಸ್ಸಿನೊಂದಿಗೆ ಸ್ವೀಕೃತವಾದ ಪ್ರಸ್ತಾವನೆಗಳ ಸಂಖ್ಯೆ ಎಷ್ಟು; (ಜಿಲ್ಲಾವಾರು ದೇವಸ್ಥಾನವಾರು ವಿವರ ನೀಡುವುದು)</td><td>ಕಳೆದ 10 ತಿಂಗಳಿನಲ್ಲಿ ಅನುವಂಶಿಕ ಮೊಕ್ತೇಸರರ ಹುದ್ದೆಗೆ ನಿಯುಕ್ತಿ ಕುರಿತಂತೆ ಜಿಲ್ಲಾವಾರು ದೇವಸ್ಥಾನದ ವಿವರಗಳಿಗೆ ಸಂಬಂಧಿಸಿದಂತೆ ಜಿಲ್ಲಾಧಿಕಾರಿ, ದಕ್ಷಿಣ ಕನ್ನಡ ಜಿಲ್ಲೆ ಇವರಿಂದ ಮಾತ್ರ ಒಟ್ಟು 5 ಪ್ರಸ್ತಾವನೆಗಳು ಸ್ವೀಕೃತವಾಗಿದ್ದು, ಉಳಿದಂತೆ ಯಾವುದೇ ಜಿಲ್ಲೆಯಿಂದ ಇಂತಹ ಪ್ರಸ್ತಾವನೆಗಳು ಸ್ವೀಕೃತವಾಗಿರುವುದಿಲ್ಲ.<br><br>ವಿವರಗಳು ಈ ಕೆಳಕಂಡಂತಿದೆ.<br>
<table>
<tr><th>ಕ್ರ ಸಂ</th><th>ಜಿಲ್ಲೆ</th><th>ಕ್ರ ಸಂ</th><th>ದೇವಾಲಯದ ಹೆಸರು ಮತ್ತು ವಿಳಾಸ</th></tr>
<tr><td rowspan="5">1.</td><td rowspan="5">ದಕ್ಷಿಣ ಕನ್ನಡ</td><td>1.</td><td>ಶ್ರೀ ಸದಾಶಿವ ಮಹಾಗಣಪತಿ ದೇವಸ್ಥಾನ, ಸುರತ್ಕಲ್, ಮಂಗಳೂರು.</td></tr>
<tr><td>2.</td><td>ಶ್ರೀ ಕುಮಾರಮಂಗಿಲ ಸುಬ್ರಾಯ ದೇವಾಲಯ, ಕಿಲ್ಪಾಡಿ, ಮಂಗಳೂರು ತಾಲ್ಲೂಕು</td></tr>
<tr><td>3.</td><td>ಶ್ರೀ ಉಳ್ಯಾಲ್ತಿ ದೇವಾಲಯ, ಅನಂತಾಡಿ ಗ್ರಾಮ, ಅನಂತಾಡಿ ಅಂಚೆ, ಬಂಟ್ವಾಳ ತಾಲ್ಲೂಕು,</td></tr>
<tr><td>4.</td><td>ಶ್ರೀ ಗೋಪಾಕೃಷ್ಣ, ದೇವಾಲಯ, ಬಡಗಎಡಪದವು, ಮಂಗಳೂರು ತಾಲ್ಲೂಕು,</td></tr>
<tr><td>5.</td><td>ಶ್ರೀ ಮಂಗಳಾದೇವಿ ದೇವಾಲಯ, ಬೋಳಾರ, ಮಂಗಳೂರು ತಾಲ್ಲೂಕು,</td></tr>
</table></td></tr>
<tr><td>ಆ)</td><td>ಕಳೆದ 10 ತಿಂಗಳಿನಲ್ಲಿ ಅನುವಂಶಿಕ ಮೊಕ್ತೇಸರರ ನಿಯುಕ್ತಿ ಕುರಿತಾಗಿ ಧಾರ್ಮಿಕ ದತ್ತಿ ಆಯುಕ್ತರ ಕಛೇರಿಯಲ್ಲಿ ಜಿಲ್ಲಾಧಿಕಾರಿಗಳ ಕಛೇರಿಯಿಂದ ಶಿಫಾರಸ್ಸಿನೊಂದಿಗೆ ಸ್ವೀಕೃತವಾದ ಪ್ರಸ್ತಾವನೆಗಳಲ್ಲಿ ಎಷ್ಟು ಪ್ರಸ್ತಾವನೆಗಳನ್ನು ಅಂಗೀಕರಿಸಿ ಅನುವಂಶಿಕ ಮೊಕ್ತೇಸರರ ಉತ್ತರಾಧಿಕಾರಿಯವರನ್ನು ಘೋಷಿಸಲಾಗಿದೆ; ಬಾಕಿ ಇರುವ ಪ್ರಸ್ತಾವನೆಗಳ ಸಂಖ್ಯೆ ಎಷ್ಟು; (ಜಿಲ್ಲಾವಾರು ವಿವರ ನೀಡುವುದು)</td><td>ಅನುವಂಶಿಕ ಮೊಕ್ತೇಸರರ ಹುದ್ದೆಗೆ ನಿಯುಕ್ತಿ ಕುರಿತಂತೆ 5 ಪ್ರಸ್ತಾವನೆಗಳು ಸ್ವೀಕೃತವಾಗಿದ್ದು, ಈವರೆಗೂ ಸದರಿ ಪ್ರಸ್ತಾವನೆಗಳಿಗೆ ಯಾವುದೇ ಪ್ರಸ್ತಾವನೆಯನ್ನು ಅಂಗೀಕರಿಸಿ ಅನುವಂಶಿಕ ಮೊಕ್ತೇಸರರ ಉತ್ತರಾಧಿಕಾರಿಯನ್ನಾಗಿ ಘೋಷಿಸಲಾಗಿರುವುದಿಲ್ಲ.<br><br>ಈ ಕೆಳಕಂಡ ಪ್ರಸ್ತಾವನೆಗಳಿಗೆ ರಾಜ್ಯ ಧಾರ್ಮಿಕ ಪರಿಷತ್ ಸಭೆಯ ಅಂತಿಮ ತೀರ್ಮಾನಕ್ಕೆ ಬಾಕಿ ಇರುತ್ತವೆ<br>
<table>
<tr><th>ಕ್ರ ಸಂ</th><th>ಜಿಲ್ಲೆ</th><th>ಇತ್ಯರ್ಥವಾಗಿರುವ ಪ್ರಸ್ತಾವನೆಗಳು</th><th>ಇತ್ಯರ್ಥಕ್ಕೆ ಬಾಕಿರುವ ಪ್ರಸ್ತಾವನೆಗಳು</th></tr>
<tr><td>1.</td><td>ದಕ್ಷಿಣ ಕನ್ನಡ</td><td>0</td><td>5</td></tr>
</table></td></tr>
<tr><td>ಇ)</td><td>ದಕ್ಷಿಣ ಕನ್ನಡ ಜಿಲ್ಲೆಯ ಮಂಗಳೂರು ತಾಲ್ಲೂಕಿನ ಸುರತ್ಕಲ್‌ನಲ್ಲಿರುವ ಶ್ರೀ ಸದಾಶಿವ ಮಹಾಗಣಪತಿ ದೇವಸ್ಥಾನದ ಮೊಕ್ತೇಸರರ ಉತ್ತರಾಧಿಕಾರಿಯ ಸ್ಥಾನಕ್ಕೆ ನಿಯುಕ್ತಿಗೊಳಿಸಲು ಜಿಲ್ಲಾಧಿಕಾರಿಗಳ ಕಛೇರಿಯಿಂದ ಶಿಫಾರಸ್ಸು ಮಾಡಲಾದ ಪತ್ರವನ್ನು ಯಾವಾಗ ಧಾರ್ಮಿಕ ದತ್ತಿ ಇಲಾಖೆಯ ಆಯುಕ್ತರ ಕಛೇರಿಯಲ್ಲಿ ಸ್ವೀಕರಿಸಲಾಯಿತು; ಯಾವ</td><td>ಜಿಲ್ಲಾಧಿಕಾರಿ, ದಕ್ಷಿಣ ಕನ್ನಡ ಜಿಲ್ಲೆ ಇವರಿಂದ ಪ್ರಸ್ತಾವನೆಯು ದಿನಾಂಕ:03.09.2020 ರಂದು ಧಾರ್ಮಿಕ ದತ್ತಿ ಆಯುಕ್ತರ ಕಛೇರಿಯಲ್ಲಿ ಸ್ವೀಕೃತವಾಗಿರುತ್ತದೆ.<br><br>ಜಿಲ್ಲಾಧಿಕಾರಿ ದಕ್ಷಿಣ ಕನ್ನಡ ಜಿಲ್ಲೆ ಇವರಿಂದ ಸ್ವೀಕರಿಸಲಾದ ಪ್ರಸ್ತಾವನೆಯನ್ನು ಪರಿಶೀಲಿಸಿ ಆಯುಕ್ತರು, ಧಾರ್ಮಿಕ ದತ್ತಿ ಇಲಾಖೆ, ಬೆಂಗಳೂರು ಇವರು ಈ ಕೆಳಕಂಡ ದಾಖಲಾತಿಗಳನ್ನು ಕೋರಿ ದಿನಾಂಕ:24.11.2020ರಲ್ಲಿ ಪತ್ರವನ್ನು ಬರೆಯಲಾಗಿದೆ.<br>
<table>
<tr><th>ಕ್ರ.ಸಂ.</th><th>ಕೋರಿರುವ ದಾಖಲೆ</th></tr>
</table></td></tr>
</table>

| | ದಿನಾಂಕದಂದು ಅನುವಂಶಿಕ ಮೊಕ್ತೇಸರರ ನಿಯುಕ್ತಿ ಕುರಿತ ಆದೇಶ ಹೊರಡಿಸಲಾಗಿದೆ: ಇದುವರೆಗೂ ಹೊರಡಿಸಿಲ್ಲವೆಂದಾದಲ್ಲಿ ಯಾವ ಕಾರಣಕ್ಕೆ ಹೊರಡಿಸಿರುವುದಿಲ್ಲ: ಜಿಲ್ಲಾಧಿಕಾರಿಗಳ ಪತ್ರ ಸ್ವೀಕರಿಸಿದ ಬಳಿಕ ಧಾರ್ಮಿಕ ಪರಿಷತ್ತಿನ ಎಷ್ಟು ಸಭೆಗಳನ್ನು ನಡೆಸಲಾಗಿದೆ? (ದಿನಾಂಕದೊಂದಿಗೆ ವಿವರ ನೀಡುವುದು) | |
|---|---|---|

| | |
|---|---|
| 1. | ಕುಟುಂಬದ ಇತರೆ ಎಲ್ಲಾ ಸದಸ್ಯರ ನಿರಾಕ್ಷೇಪಣಾ ಪ್ರಮಾಣ ಪತ್ರ |
| 2. | ದಾಖಲೆಗಳ ದೃಢೀಕೃತ ಪ್ರತಿಗಳು |
| 3. | ಮರಣ ಪ್ರಮಾಣ ಪತ್ರದ ಮೂಲ ಪ್ರತಿ |

ಜಿಲ್ಲಾಧಿಕಾರಿ, ದಕ್ಷಿಣ ಕನ್ನಡ ಜಿಲ್ಲೆ ಇವರು ಸದರಿ ದಾಖಲಾತಿಗಳನ್ನು ಆಯುಕ್ತರು, ಧಾರ್ಮಿಕ ದತ್ತಿ ಇಲಾಖೆ ಇವರಿಗೆ ದಿನಾಂಕ:17.03.2022ರಂದು ಸಲ್ಲಿಸಿರುತ್ತಾರೆ.

ಆಯುಕ್ತರು, ಧಾರ್ಮಿಕ ದತ್ತಿ ಇಲಾಖೆ ಇವರು ಪ್ರಸ್ತಾವನೆಯನ್ನು ಪರಿಶೀಲಿಸಿ, ದೇವಾಲಯದ ಈ ಹಿಂದಿನ ಮೊಕ್ತೇಸರರಾದ ದಾಸಮಯ್ಯ ಎಂಬುವವರಿಗೆ ಪ್ರಭಾಕರಮಯ್ಯ ಮತ್ತು ಗಣಪತಿಮಯ್ಯ ಎಂಬ ಇಬ್ಬರು ಗಂಡು ಮಕ್ಕಳಿದ್ದು, ದಿನಾಂಕ:22.07.2019 ರಂದು ಹಿರಿಯ ಮಗನಾದ ಪ್ರಭಾಕರಮಯ್ಯ ಇವರ ತಂದೆಯ ನಿಧನದಿಂದ ತೆರವಾಗಿರುವ ದೇವಾಲಯದ ಅನುವಂಶಿಕ ಅರ್ಚಕ ಮತ್ತು ಮೊಕ್ತೇಸರರ ಸ್ಥಾನಕ್ಕೆ ಅವರ ತಮ್ಮನಾದ ಗಣಪತಿಮಯ್ಯ ರವರನ್ನು ನೇಮಿಸಲು ಆಕ್ಷೇಪಣೆ ಇಲ್ಲವೆಂದು ಒಪ್ಪಿಗೆ ಪತ್ರವನ್ನು ನೀಡಿರುತ್ತಾರೆ. ನಂತರದಲ್ಲಿ ಸದರಿಯವರು ದಿನಾಂಕ:19.01.2022 ರಂದು ನೀಡಿರುವ ಪತ್ರದಲ್ಲಿ ತಾನು ಈ ಹಿಂದೆ ನೀಡಿದ್ದ ನಿರಾಕ್ಷೇಪಣೆ ಪತ್ರವನ್ನು ಮತ್ತು ಅನುಮತಿ ಪತ್ರವನ್ನು ರದ್ದುಪಡಿಸಿ, ಅನುವಂಶಿಕ ಮೊಕ್ತೇಸರರ ಸ್ಥಾನವನ್ನು ತಮಗೆ ನೀಡುವಂತೆ ಮನವಿ ಮಾಡಿರುತ್ತಾರೆ. ಈ ಬಗ್ಗೆ ಜಿಲ್ಲಾಧಿಕಾರಿ, ದಕ್ಷಿಣ ಕನ್ನಡ ಜಿಲ್ಲೆ ಇವರಿಗೆ ಸ್ಪಷ್ಟ ಅಭಿಪ್ರಾಯದ ವರದಿಯನ್ನು ನೀಡುವಂತೆಆಯುಕ್ತರವರ ಪತ್ರ ದಿನಾಂಕ:09.03.2022ರಲ್ಲಿ ಕೋರಲಾಗಿರುತ್ತದೆ.

ಸದರಿ ಸ್ಪಷ್ಟೀಕರಣಕ್ಕೆ ಜಿಲ್ಲಾಧಿಕಾರಿ, ದಕ್ಷಿಣ ಕನ್ನಡ ಜಿಲ್ಲೆ ಇವರು ದಿನಾಂಕ:11.10.2022ರಲ್ಲಿ ವರದಿಯನ್ನು ಸಲ್ಲಿಸುತ್ತಾ, ದಾಸಮಯ್ಯ ರವರ ನಿಧನದಿಂದ ತೆರವಾದ ಸ್ಥಾನಕ್ಕೆ ಅವರ ಮಕ್ಕಳಾದ ಶ್ರೀ ಪ್ರಭಾಕರ ಮಯ್ಯ, ಶ್ರೀ ಗಣಪತಿ ಮಯ್ಯ ಮತ್ತು ಅವರ ಕುಟುಂಬದ ಮತ್ತೊಂದು ಕವಲಿನ ದಿವಂಗತ ಕೃಷ್ಣಮಯ್ಯರವರ ಮಗನಾದ ಶ್ರೀ ವೆಂಕಟರಮಣಮಯ್ಯ ರವರು ಆಕ್ಷಾಂಕ್ಷಿಗಳಾಗಿರುವುದರಿಂದ, ಶ್ರೀ ಸದಾಶಿವ ಗಣಪತಿ ದೇವಸ್ಥಾನದ ಅನುವಂಶಿಕ ಮೊಕ್ತೇಸರರ ನಿಧನದಿಂದ ತೆರವಾದ ಸ್ಥಾನಕ್ಕೆ ದಾಖಲಾತಿ ಮಾಡುವವರೆಗೆ ಪ್ರಸ್ತಾವನೆಯನ್ನು ರಾಜ್ಯ ಧಾರ್ಮಿಕ ಪರಿಷತ್ತಿನ ಸಭೆಯಲ್ಲಿ ಮಂಡಿಸಿ, ತೀರ್ಮಾನ ಕೈಗೊಳ್ಳಲು ಕೋರಿರುತ್ತಾರೆ.

ನಂತರದಲ್ಲಿ ರಾಜ್ಯ ಧಾರ್ಮಿಕ ಪರಿಷತ್ ಸದಸ್ಯ ಕಾರ್ಯದರ್ಶಿಯವರು ಪ್ರಸ್ತಾವನೆಯನ್ನು ಪರಿಶೀಲಿಸಿ ರಾಜ್ಯ ಧಾರ್ಮಿಕ ಪರಿಷತ್ ಸಭೆಯಲ್ಲಿ ಪ್ರಸ್ತಾವನೆ ಮಂಡಿಸಲು ಕ್ರಮಕೈಗೊಳ್ಳಬೇಕಿರುತ್ತದೆ. ಜಿಲ್ಲಾಧಿಕಾರಿಯವರಿಂದ ವರದಿ ಸ್ವೀಕೃತವಾಗಿ ರಾಜ್ಯ ಧಾರ್ಮಿಕ ಪರಿಷತ್ತಿನ ಮುಂದೆ ಪ್ರಸ್ತಾವನೆ ಮಂಡಿಸಲು ವಿಳಂಬವಾಗಿರುವ ಬಗ್ಗೆ ಕ್ರಮ ಕೈಗೊಳ್ಳಲು ಪರಿಶೀಲಿಸಲಾಗುತ್ತದೆ.

ದಿನಾಂಕ:30.09.2020 ರಿಂದ ಈವರೆಗೆ ಈ ಕೆಳಕಂಡ ದಿನಾಂಕಗಳಂದು ರಾಜ್ಯ ಧಾರ್ಮಿಕ ಪರಿಷತ್ತಿನ ಸಭೆಗಳು ನಡೆದಿರುತ್ತವೆ.

| ಕ್ರ.ಸಂ. | ಸಭೆ ನಡೆದ ದಿನಾಂಕ | ಕ್ರ.ಸಂ. | ಸಭೆ ನಡೆದ ದಿನಾಂಕ |
|---|---|---|---|
| 1 | 21.10.2020 | 6 | 06.09.2021 |
| 2 | 06.01.2021 | 7 | 23.12.2021 |
| 3 | 22.01.2021 | 8 | 18.07.2022 |
| 4 | 09.04.2021 | 9 | 02.11.2022 |
| 5 | 22.06.2021 | 10 | 27.12.2022 |

ಕರ್ನಾಟಕ ಹಿಂದೂ ಧಾರ್ಮಿಕ ಸಂಸ್ಥೆಗಳು ಮತ್ತು ಧರ್ಮಾದಾಯ ದತ್ತಿಗಳ ತಿದ್ದುಪಡಿ ಅಧಿನಿಯಮ 2011ರ ಕಲಂ 20-ಎ(2)(vii) ರ ಅಡಿಯಲ್ಲಿ ಶಾಶ್ವತ ಖಾಲಿ ಸ್ಥಾನವು ಉಂಟಾದಾಗ ಮತ್ತು ವಂಶಪಾರಂಪರ್ಯ ಪದದಲ್ಲಿ ಅದಕ್ಕೆ ಯಾವುದೇ ವಿವಾದವಿಲ್ಲದಿದ್ದರೆ, ವಂಶಪಾರಂಪರ್ಯ

| | | |
|---|---|---|
| | | ನ್ಯಾಸಧಾರಿಯ ಪದಕ್ಕೆ ಉತ್ತರಾಧಿಕಾರಿಯಾಗಲು ಹಕ್ಕುಳ್ಳ ಕುಟುಂಬದ ಸದಸ್ಯರ ಹೆಸರನ್ನು ದಾಖಲು ಮಾಡುವ ಅಧಿಕಾರವು ರಾಜ್ಯ ಧಾರ್ಮಿಕ ಪರಿಷತ್ತಿಗೆ ಪ್ರದತ್ತವಾಗಿರುತ್ತದೆ.<br><br>ಅದರಂತೆ, ದಕ್ಷಿಣ ಕನ್ನಡ ಜಿಲ್ಲೆ, ಮಂಗಳೂರು ತಾಲ್ಲೂಕು, ಸುರತ್ಕಲ್ ಶ್ರೀ ಸದಾಶಿವ ಮಹಾಗಣಪತಿ ದೇವಾಲಯದ ಅನುವಂಶಿಕ ಮೊಕ್ತೇಸರರ ನಿಧನದಿಂದ ತೆರವಾದ ಸ್ಥಾನಕ್ಕೆ ಉತ್ತರಾಧಿಕಾರಿಯನ್ನು ದಾಖಲು ಮಾಡುವ ಬಗ್ಗೆ ರಾಜ್ಯ ಧಾರ್ಮಿಕ ಪರಿಷತ್ತಿನ ಮುಂದಿನ ಸಭೆಯಲ್ಲಿ ಪ್ರಸ್ತಾವನೆ ಮಂಡಿಸಿ ಕ್ರಮಕೈಗೊಳ್ಳಲಾಗುವುದು. |

ಸಂಖ್ಯೆ: ಕಂಇ 16 ಮುನಪ್ರ 2023

(ಶಶಿಕಲಾ. ಅ.ಜೊಲ್ಲೆ).
ಧಾರ್ಮಿಕ ದತ್ತಿ, ಹಜ್ ಹಾಗೂ ವಕ್ಫ್ ಸಚಿವರು